

ಆತ್ಮೀಯ ದೃಢೀಕರಣಾರ್ಥಿಗಳೇ,

ನೀವೀಗ ಕ್ರಿಸ್ತನಿಗೆ ವಿಧೇಯರಾಗಿರಲು ಮತ್ತು ಆತನ ಸೇವೆ ಮಾಡಲು ಬದ್ಧರಾಗಿರಲು ನಿರ್ಧರಿಸುವವರಾಗಿದ್ದೀರಿ. ಇದು ನೀವು ಮಾಡಬಹುದಾದ ಅತ್ಯುತ್ತಮ ನಿರ್ಧಾರವಾಗಿರುವುದೆಂದು ನೀವು ಖಚಿತರಾಗಿರಬಹುದು. ಕ್ರಿಸ್ತನನ್ನು ಹಿಂಬಾಲಿಸುವುದರಿಂದ ನಿವೆಂದಿಗೂ ದಾರಿ ತಪ್ಪಲಾರಿರಿ. ನೀವಾತನ ಸೇವೆ ಮಾಡುವಾಗ, ನೀವೆಂದಿಗೂ ನಿರಾಶರಾಗುವುದಿಲ್ಲವೆಂಬ ಖಾತರಿಯು ಕೊಡಲಾಗಿದೆ.

ಕರ್ತನು ನಿಮ್ಮ ಕಾಳಜಿವಹಿಸುವನು. ಮತ್ತು ನಿಮ್ಮ ಸಹೋದರ ಸಹೋದರಿರಾದ ನಾವು, ನಿಮ್ಮ ಬೆಂಬಲಕ್ಕೆ ಯಾವಾಗಲೂ ಇರುತ್ತೇವೆ. ಈ ಗಂಭೀರವಾದ ಗಳಿಗೆಯಲ್ಲಿ, ಸಭೆಯು ಕೂಡ ನಿಮ್ಮೊಂದಿಗೆ ಸೇರಿ ದೇವರಿಗೆ ಈ ಮಾತನ್ನು ಹೇಳುತ್ತದೆ:

***“ನಿನ್ನ ಚಿತ್ತದಂತೆ ನಡಕೊಳ್ಳುವದನ್ನು ನನಗೆ ಕಲಿಸು; ನನ್ನ ದೇವರು ನೀನಲ್ಲವೋ? ಶುಭಕಾರಿಯಾಗಿರುವ ನಿನ್ನ ಆತ್ಮನು ನನ್ನನ್ನು ಮಟ್ಟನೆಲದಲ್ಲಿ ನಡಿಸಲಿ” (ಕೀರ್ತನೆ 143: 10).***

ನಾವು ಒಟ್ಟಿಗೆ ಸೇರಿ ಕಲಿಯಬೇಕಾದ ಇನ್ನೂ ಅನೇಕ ಸುಂದರವಾದ ವಿಷಯಗಳುಂಟು! ಸಭೆಯಲ್ಲಿ ನಿಮಗೆ ಶ್ರೇಷ್ಠ ಆಶೀರ್ವಾದವನ್ನೂ ಸಂತೋಷವನ್ನೂ ನಾನು ನಿಮಗೋಸ್ಕರ ಬಯಸುತ್ತೇನೆ ಮತ್ತು ಪ್ರಿಯ ದೃಢೀಕರಣಾರ್ಥಿಗಳೇ, ನಿಮಗೆ ನನ್ನ ಹೃದಯಪೂರ್ವಕವಾದ ಶುಭಸಂದೇಶವನ್ನು ಕಳುಹಿಸುತ್ತೇನೆ.

Jean-Luc Schneider